# ಪತ್ರಿಕಾ ಪ್ರಕಟಣೆ

## ವಿಶ್ವವಿದ್ಯಾಲಯ ಪೊಲೀಸ ಠಾಣೆ ಗುನ್ನೆ ನಂ 244/2021 ಕಲಂ 363.302.201 ಐ.ಪಿ.ಸಿ ಪ್ರಕರಣದಲ್ಲಿ ಕೊಲೆಗಾರರ ಬಂಧನ.

* * * * *

ಕಲಬುರಗಿ ವಿಶ್ವ ವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಕಲಬುರಗಿ ನಗರದ ಅಬುಬಕರ ಕಾಲೋನಿಯ ಹತ್ತಿರ ಉಸುಕಿನಲ್ಲಿ ದಿನಾಂಕ 06-12-2021 ರಂದು 1:30 ಪಿ.ಎಮ್ ದಿಂದ ದಿನಾಂಕ 07-12-2021 ರಂದು ಮದ್ಯಾಹ್ನ 1:30 ಪಿ.ಎಮ್ ದ ಅವಧಿಯಲ್ಲಿ ಮುಜಮಿಲ್ ಅಕ್ಕದ ತಂದೆ ನಿಸಾರ ಅಕ್ಕದ ವಯ: 2 1/2 ವರ್ಷ, ಈತನಿಗೆ ಅಪಹರಿಸಿಕೊಂಡು ಉಸುಕಿನಲ್ಲಿ ಮುಚ್ಚಿ ಕೊಲೆ ಮಾಡಿ ಪರಾರಿಯಿದ್ದ ಆರೋಪಿತರ ಪತ್ತೆಗಾಗಿ, ಬಲೆ ಬೀಸಿ, ಆರೋಪಿತರು ಇರುವ ಬಗ್ಗೆ ಖಚಿತ ಭಾತ್ಮಿ ಮೇರೆಗೆ, ಕಲಬುರಗಿ ನಗರದ ಪೊಲೀಸ ಆಯುಕ್ತರಾದ ಶ್ರೀ ವೈ.ಎಸ್. ರವಿಕುಮಾರ ಐಪಿಎಸ್, ಉಪ ಪೊಲೀಸ್ ಆಯುಕ್ತರಾದ ಶ್ರೀ ಅಡ್ಡೂರು ಶ್ರೀನಿವಾಸಲು ಐ.ಪಿ.ಎಸ್, ಉಪ ಪೊಲೀಸ್ ಆಯುಕ್ತರಾದ ಶ್ರೀ ಶ್ರೀಕಾಂತ ಕಟ್ಟಿಮನಿ ಕೆ.ಎಸ್.ಪಿ.ಎಸ್ ರವರ ಮತ್ತು "ಸಬ್ ಅರ್ಬನ್" ಉಪ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ ಜೆ.ಹೆಚ್ ಇನಾಮದಾರ್ ರವರ ನೇತೃತ್ವದಲ್ಲಿ ವಿಶ್ವ ವಿದ್ಯಾಲಯ ಪೊಲೀಸ್ ಠಾಣೆಯ ಇನ್ಸಪೆಕ್ಟರ್‌ರವರಾದ ಶ್ರೀ ಅರುಣ ಎಸ್ ಮುರುಗುಂಡಿ, ಹಾಗೂ ಸಿಬ್ಬಂದಿ ಜನರಾದ ರಾಜು ಟಾಕಳೆ, ಪ್ರಭಾಕರ, ಪ್ರಕಾಶ, ಶಶಿಕಾಂತ, ಮಂಜುನಾಥ, ಬಂದೇನವಾಜ್ ರವರು ಆರೋಪಿತರನ್ನು ಹಿಡಿದು ಅವರಿಂದ ಒಂದು ಅಪರಾಧಕ್ಕೆ ಬಳಸಿದ ಮೋಟಾರ ಸೈಕಲ್ ಜಪ್ತ ಮಾಡಿಕೊಂಡಿದ್ದು ಇರುತ್ತದೆ. ಈ ಹಿಂದೆ ಮೃತ ಮಗುವಿನ ತಂದೆಯಾದ ನಿಸಾರ ಅಕ್ಕದ ಈತನ ಕಿರಾಣಿ ಅಂಗಡಿಯಲ್ಲಿ ಆರೋಪಿ ನವಾಜ್ ಈತನು ಸಿಗರೇಟ್ ಮತ್ತು ಗುಟಕಾ ಉದ್ರಿ ತೆಗೆದುಕೊಂಡಿದ್ದು, ಆ ವಿಷಯವಾಗಿ ಮೃತ ಮಗುವಿನ ತಂದೆಗೂ ಮತ್ತು ಆರೋಪಿ ನವಾಜ್ ಈತನಿಗೂ ಸಾರ್ವಜನಿಕ ಸ್ಥಳದಲ್ಲಿ ಜಗಳವಾಗಿದ್ದರಿಂದ ಆರೋಪಿ ನವಾಜ್ ಈತನಿಗೆ ಸಾರ್ವಜನಿಕ ಸ್ಥಳದಲ್ಲಿ ಮಾನ ಮಾರ್‍ಯಾದೆ ಹೋಗಿದ್ದರಿಂದ ಅದೇ ವೈಷಮ್ಯ ಇಟ್ಟುಕೊಂಡು ಮಗು ಮುಜಮಿಲ್ ಅಕ್ಕದ ಈತನಿಗೆ ನವಾಜ್ ಮತ್ತು ಇತರರು ಕೂಡಿಕೊಂಡು ಅಪಹರಿಸಿಕೊಂಡು ಉಸುಕಿನಲ್ಲಿ ಮುಚ್ಚಿ ಕೊಲೆ ಮಾಡಿದ ಬಗ್ಗೆ ವಿಚಾರಣೆ ಕಾಲಕ್ಕೆ ಬೆಳಕಿಗೆ ಬಂದಿರುತ್ತದೆ. ಸದರ ಆರೋಪಿತರಿಗೆ ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ.

ಸದರಿ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶ್ವಸಿಯಾದ ಶ್ರೀ ಜೆ.ಹೆಚ್.ಇನಾಮದಾರ್ ಸಹಾಯಕ ಪೊಲೀಸ ಆಯುಕ್ತರು ಕಲಬುರಗಿ ನಗರ ಮತ್ತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಶ್ರೀ ಅರುಣ ಮುರುಗುಂಡಿ ಪಿಐ, ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ರವರು ಮತ್ತು ಮಾನ್ಯ ಡಿ.ಸಿ.ಪಿ. (ಕಾ.ಸು.), ಕಲಬುರಗಿ ನಗರ ಹಾಗೂ ಡಿ.ಸಿ.ಪಿ. (ಅ.ಸಂ.), ರವರು ಮೆಚ್ಚುಗೆ ವ್ಯಕ್ತಪಡಿಸಿದ್ದು ಇರುತ್ತದೆ.

Scanned with CamScanner